ಚುಂಚನಕಟ್ಟೆ, ಸಾಲಿಗ್ರಾಮ, ಹನಸೋಗೆ

ಪ್ರೊ. ಎಸ್. ಕೆ. ರಾಮಚಂದ್ರರಾವ್

523

ಚುಂಚನಕಟ್ಟೆ, ಸಾಲಿಗ್ರಾಮ, ಹನಸೋಗೆ

ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

CHUNCHANAKATTE, SALIGRAMA, HANASOGE — A monograph on the towns of Chunchanakatte, Saligrama and Hanasoge by Prof. S. K. Ramachandra Rao and Published by G. K. Ananthram for IBH Prakashana Gandhinagar, Bangalore–560 009.

© 1983 by the Publisher

ಬೆಲೆ : ರೂ. 2-00

ಚಿತ್ರಗಳು : ಬಿ. ಕೇಸರ್‌ಸಿಂಗ್

ಮೊದಲ ಮುದ್ರಣ : 1983. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾವ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು–560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು–560 054.

ಚುಂಚನಕಟ್ಟೆ, ಸಾಲಿಗ್ರಾಮ, ಹನಸೋಗೆ

ಕಾವೇರಿಯ ದಾರಿಯಲ್ಲಿ

ದಕ್ಷಿಣ ದೇಶವು ಪಡೆದುಕೊಂಡಿರುವ ವರಗಳಲ್ಲಿ ಕಾವೇರಿ ನದಿ ಒಂದು. ಈ ನದಿ ಹರಿವ ತಾಣವೆಲ್ಲ ಬೇಸಾಯಕ್ಕೆ, ವ್ಯಾಪಾರಕ್ಕೆ ಉತ್ಕೃಷ್ಟ. ಅಲ್ಲೆಲ್ಲ ಬೆಳೆ ಹುಲುಸಾಗಿರುವುದಷ್ಟೇ ಅಲ್ಲ, ಅಲ್ಲಿನ ಜನರಿಗೆ ಸಂಸ್ಕೃತಿಯೂ ಒಗ್ಗಿಬಂದಿದೆ. ಕನ್ನಡನಾಡು, ತಮಿಳುನಾಡುಗಳಿಗೆ ಪ್ರತ್ಯಕ್ಷವಾಗಿ, ನೆರೆನಾಡುಗಳಿಗೆ ಪರೋಕ್ಷವಾಗಿ ಈ ನದಿಯಿಂದ ಸಂದಿರುವ ಉಪಕಾರವನ್ನು ಜನ ಎಂದೆಂದಿಗೂ ಮರೆಯುವಂತಿಲ್ಲ. ಇಲ್ಲಿನ ಜ ನ ರು ಕಾವೇರಿಯನ್ನು ತಾಯಿಯೆಂದೇ ಕರೆದು, ನದಿಯನ್ನು ಭಯಭಕ್ತಿಗಳಿಂದ ನೋಡುವುದರಲ್ಲಿ ಆಶ್ಚರ್ಯವೇನಿಲ್ಲ. ಚೋಳರಾಜನಾದ ರಾಜ ಕೇಸರಿವರ್ಮ ತನ್ನನ್ನು "ಸಕಳ ಜನ ದುರಿತ ಹರಣ ನಿಪುಣ ಕವೇರ ಕನ್ಯಕಾ ಸಖೀಯಮಾನ"ನೆಂದು ಬಣ್ಣಿಸಿಕೊಂಡಿರುವ ಶಾಸನ ಸೋಮವಾರಪೇಟೆಯ ಮಾಲಂಬಿ ಗ್ರಾಮದಲ್ಲಿ ದೊರೆತಿದೆ. ಕಾವೇರಿಯ ಹಿರಿಮೆಯನ್ನು ಹೀಗೆಯೇ ಹಾಡಿ ಹೊಗಳುವ ಹಾಡುಗಳೂ ಜನರ ಬಾಯಲ್ಲಿ ನಿಂತಿವೆ.

ಬೆಡಗಿನ ಬೀಡೆನಿಸಿದ ಕೊಡಗಿನ ನಡುವೆ ಬ್ರಹ್ಮಗಿರಿಯಲ್ಲಿ ಹುಟ್ಟಿ, ಕನ್ನಡನಾಡು ಮತ್ತು ತಮಿಳುನಾಡುಗಳಲ್ಲಿ ಏಳುನೂರು ಅರವತ್ತೈದು ಕಿಲೋಮೀಟರುಗಳಷ್ಟು ದೂರ ಹರಿದು, ತಂಜಾವೂರು ಜಿಲ್ಲೆಯ ಶೀರ್ಕಾಳಿ ತಾಲ್ಲೂಕಿಗೆ ಸೇರಿರುವ ಕಾವೇರಿ ಪೂಂಪಟ್ಟಣದಲ್ಲಿ (ಇದನ್ನು ಪೂಂಪುಹಾರ್ ಎಂದೂ ಕರೆಯುತ್ತಾರೆ) ಬಂಗಾಳಕೊಲ್ಲಿಗೆ ಸೇರಿ ಮರೆಯಾಗುವವರೆಗೂ ಈ ನದಿಯು ನೆಲವನ್ನೆಲ್ಲ ಬೇಸಾಯಕ್ಕೆ ಅಣಿಮಾಡಿದೆ. ಜನರ ಬದುಕಿಗೆ ಹಲವಾರು ಬಗೆಗಳಲ್ಲಿ ನೆರವಾಗಿದೆ. ಅದು ಹರಿದ ದಾರಿಯಲ್ಲಿ ಎದ್ದುಕೊಂಡಿರುವ ಪುಣ್ಯಕ್ಷೇತ್ರಗಳೆಷ್ಟೋ, ವಾಣಿಜ್ಯಕೇಂದ್ರಗಳೆಷ್ಟೋ, ಸಾಂಸ್ಕೃತಿಕ ಸ್ಥಳಗಳೆಷ್ಟೋ, ರಾಜಕಾರಣಕ್ಕೆತ್ತಿದ ಊರುಗಳೆಷ್ಟೋ !

ಕೊಡಗಿನಲ್ಲಿ ಭಾಗಮಂಡಲ, ಹರಿಶ್ಚಂದ್ರ, ಪಾಲೂರು (ಭಾಗಮಂಡಲದಿಂದ ಇಪ್ಪತ್ತಾರು ಕಿಲೋಮೀಟರುಗಳ ದೂರ), ಬಲಮುರಿ ('ವಲಂಪುರಿ' ಮಡಿಕೇರಿಯಿಂದ ಇಪ್ಪತ್ತು ಕಿಲೋಮೀಟರುಗಳ ದೂರದಲ್ಲಿರುವ ಇಲ್ಲಿ ನದಿಯು ಬಲಗಡೆಗೆ ಮುರಿದುಕೊಳ್ಳುತ್ತದೆ), ಬೇತ್ರಿ, ಗುಹ್ಯ, ಕುಶಾಲನಗರ, ಕೂಡಿಗೆ, ರಾಮಸ್ವಾಮಿ ಕಣಿವೆ ಈ ಊರುಗಳು ಕಾವೇರಿಯಿಂದಲೇ ಹೆಸರಾದುವು. ರಾಮಸ್ವಾಮಿ ಕಣಿವೆ ಕುಶಾಲನಗರದಿಂದ ಒಂಬತ್ತು ಕಿಲೋಮೀಟರು ದೂರದಲ್ಲಿ, ನದಿಯ ಎಡದಂಡೆಯ ಮೇಲೆ ಬೆಳೆದಿರುವ ಊರು ; ಇಲ್ಲಿನ ರಾಮಲಿಂಗೇಶ್ವರನ ಗುಡಿ ಹೆಸರಾದುದು.

ರಾಮಸ್ವಾಮಿ ಕಣಿವೆಯಿಂದ ಹೊರಟು ಕಾವೇರಿಯು ಹಾಸನ ಜಿಲ್ಲೆಯನ್ನು ಶಿರಂಗಾಲ ಎಂಬ ಊರಿನ ಬಳಿ ಪ್ರವೇಶಿಸುತ್ತದೆ. ಹಾಸನ ಜಿಲ್ಲೆಯಲ್ಲಿರುವ ರಾಮನಾಥಪುರ ಕಾವೇರಿ ತೀರದ ಪುಣ್ಯಸ್ಥಳಗಳಲ್ಲಿ ಪ್ರಮುಖವಾದುದು. ರಾಮಸ್ವಾಮಿ ಕಣಿವೆಯಿಂದ ಇಪ್ಪತ್ತೈದು ಕಿಲೋಮೀಟರುಗಳಷ್ಟು ದೂರದಲ್ಲಿರುವ ಈ ಊರು ಅರಕಲಗೂಡು ತಾಲ್ಲೂಕಿಗೆ ಸೇರಿದುದು. ಮುಂದೆ ನದಿಯು ಮೈಸೂರು ಜಿಲ್ಲೆಯನ್ನು ಪ್ರವೇಶಿಸಿ ಹನಸೋಗೆ, ಸಾಲಿಗ್ರಾಮ(ರಾಮನಾಥಪುರದಿಂದ ಇಪ್ಪತ್ತೈದು ಕಿಲೋಮೀಟರುಗಳು), ಚುಂಚನಕಟ್ಟೆ (ಸಾಲಿಗ್ರಾಮದಿಂದ ಏಳು ಕಿಲೋಮೀಟರುಗಳು), ಕೃಷ್ಣರಾಜನಗರ ಈ ಊರುಗಳನ್ನು ಮುಟ್ಟುತ್ತದೆ.

ಕೃಷ್ಣರಾಜನಗರಕ್ಕೆ ಮೊದಲು ಎಡತೊರೆಯೆನ್ನುವ ಹೆಸರಿದ್ದಿತು. ಈ ಹೆಸರಿಗೆ ಕಾರಣ ಊರಿನ ಎಡಭಾಗದಲ್ಲಿ ತೊರೆ (ಎಂದರೆ ನದಿ) ಇರುವುದೇ. ಇಲ್ಲಿ ನದಿಯು ಎಡಗಡೆ ತಿರುಗುವುದರಿಂದ ಊರಿಗೆ ಈ ಹೆಸರು ಬಂದಿತೆಂದೂ ಹೇಳುತ್ತಾರೆ. ಇದು ಹೇಗಾದರೂ ಇರಲಿ. ನದಿಯ ದಡದ ಮೇಲೆ ಅರ್ಕೇಶ್ವರನ ಗುಡಿಯಿದೆ; ಚೋಳ ಶೈಲಿಯಲ್ಲಿ ಕಟ್ಟಿರುವ ದೊಡ್ಡ ಕಟ್ಟಡ. ಊರು ಕೊಂಚ ದೂರವೇ ಆದರೂ ಕಾವೇರಿಯ ಪೂಜೆಗೆ ಹೆಸರಾದ ಸ್ಥಳ.

ಈ ನಡುವೆ ಕಾವೇರಿಯ ಹತ್ತಿರವೇ ಹಲವಾರು ಇತರ ಊರುಗಳೂ ಬೆಳೆದುಕೊಂಡು ಬಂದಿವೆ – ಕೊಣನೂರು, ರುದ್ರಪಟ್ಟಣ, ಬೆಟ್ಟದಪುರ, ಕೇರಳಾಪುರ, ಬೆಳ

ವಾಡಿ, ಕಿತ್ತೂರು ಮೊದಲಾದುವು. ಈ ಊರುಗಳಲ್ಲಿ ಯಾರೂ ಕಾವೇರಿಯನ್ನು ಮರೆಯುವಂತಿಲ್ಲ.

ಕೃಷ್ಣರಾಜನಗರವನ್ನು ಬಿಟ್ಟು ಮುಂದೆ ಸಾಗಿದರೆ ಕೃಷ್ಣರಾಜಸಾಗರ. ಮೊದಲಿಗೆ ಇದಕ್ಕೆ ಕನ್ನಂಬಾಡಿಯೆಂಬ ಹೆಸರಿದ್ದಿತು; ಈಗಂತೂ ಬೃಂದಾವನವೆಂದು ಜಗತ್ ಪ್ರಸಿದ್ಧವಾಗಿದೆಯಷ್ಟೆ. ಇಲ್ಲಿ ಕಾವೇರಿ ನದಿಗೆ ಅಣೆಕಟ್ಟು ಕಟ್ಟಿದ್ದಾರೆ. ಮೈಸೂರು ಜಿಲ್ಲೆ ಸಂಪದ್ಭರಿತವಾಗಿರುವುದಕ್ಕೆ ಇದು ಕಾರಣವಾಗಿದೆ. ಮುಂದೆ ಬಲಮುರಿ (ಇಲ್ಲಿಯೂ ಕಾವೇರಿ ಬಲಗಡೆಗೆ ಮುರಿದುಕೊಳ್ಳುತ್ತದೆ, ಕೊಡಗಿನ ಬಲಮುರಿಯಲ್ಲಿರುವಂತೆ), ರಂಗನತಿಟ್ಟು (ಪಕ್ಷಿಧಾಮ), ಪಶ್ಚಿಮವಾಹಿನಿ, ಶ್ರೀರಂಗಪಟ್ಟಣ (ಕಾವೇರಿ ಇಮ್ಮುಖವಾಗಿ ಒಡೆದು ಮತ್ತೆ ಕೂಡಿಕೊಂಡು ಒಂದಾಗುತ್ತದೆ), ಸೋಮನಾಥಪುರ, ತಿರುಮಕೂಡಲು ನರಸೀಪುರ (ಕಾವೇರಿ ಕಪಿಲೆಯನ್ನು ಕೂಡಿಕೊಳ್ಳುತ್ತದೆ),ಮುಡುಕುತೊರೆ (ನದಿಯು ಡೊಂಕಾಗಿ ಹರಿಯುವುದರಿಂದ ಈ ಹೆಸರು), ತಲಕಾಡು (ನದಿಯು ನಾಲ್ಕು ಬಾರಿ ದಿಕ್ಕನ್ನು ಬದಲಿಸುತ್ತದೆ), ಸತ್ಯಾಗಾಲ.

ಇಷ್ಟೆನ್ನುವಷ್ಟರಲ್ಲಿ ಮಂಡ್ಯ ಜಿಲ್ಲೆಯನ್ನು ಹೊಕ್ಕು ಶಿವನಸಮುದ್ರ (ಮಳವಳ್ಳಿ ತಾಲ್ಲೂಕು) ಎಂಬಲ್ಲಿ ಗಗನ ಚುಕ್ಕಿ-ಭರಚುಕ್ಕಿಗಳೆಂದು ಜಲಪಾತದ ಆಟವನ್ನು ಆಡುತ್ತದೆ. ಮುಂದೆ ಮಂಡ್ಯ ಜಿಲ್ಲೆಯನ್ನೂ ಬಿಟ್ಟು ಬೆಂಗಳೂರು ಜಿಲ್ಲೆಯನ್ನು ಹೊಕ್ಕು ಸಂಗಮ (ಕನಕಪುರದಿಂದ ಹದಿನೈದು ಮೈಲು ದೂರದಲ್ಲಿ ಅರ್ಕಾವತಿ ನದಿಯೊಂದಿಗೆ

ಕೂಡಿಕೊಳ್ಳುತ್ತದೆ), ಮೇಕೆದಾಟು (ಕನಕಪುರದಿಂದ ಐದು ಕಿಲೋಮೀಟರು) ಎಂಬಲ್ಲಿ ತನ್ನ ಬೆಡಗನ್ನು ತೋರಿಸಿ, ಮುಂದೆ ಮೂವತ್ತು ಮೈಲುಗಳಷ್ಟು ದೂರ ಕನ್ನಡನಾಡಿನಲ್ಲೇ ಹರಿದು ತಮಿಳುನಾಡಿಗೆ ಸಲ್ಲುತ್ತದೆ.

ಕನ್ನಡನಾಡಿಗೂ ತಮಿಳುನಾಡಿಗೂ ನಡುವೆ ಹೊಗೇನಕಲ್ಲು. ಕನ್ನಡನಾಡು ಕಾವೇರಿಯನ್ನು ಬೀಳ್ಕೊಡುವುದು ಇಲ್ಲಿ, ತಮಿಳುನಾಡು ಕಾವೇರಿಯನ್ನು ಬರಮಾಡಿಕೊಳ್ಳುವುದೂ ಇಲ್ಲಿಯೇ. ಇಲ್ಲಿನ ಜಲಪಾತ (ನೂರು ಅಡಿ ಎತ್ತರದಿಂದ) ಹೆಸರಾದುದು. ಮುಂದೆ ಮೆಟ್ಟೂರು, ಭವಾನಿ, ಈರೋಡ್, ಕೊಡುಮುಡಿ, ನೆರೂರು, ಗುಣಶೀಲಂ, ತಿರುಪ್ಪರಾಯ್‌ತುರೈ, ಶ್ರೀರಂಗಂ ಮೊದಲಾದ ಊರುಗಳ ಹಿರಿಮೆಗೆ ಕಾರಣವಾಗಿ ಕಾವೇರಿ ಪೂಂಪಟ್ಟಣದಲ್ಲಿ ಕಡಲನ್ನು ಕೂಡಿಕೊಳ್ಳುತ್ತದೆ.

ಇದು ಕಾವೇರಿಯು ಹರಿಯುವ ಕಥೆಯಾದರೆ, ಕಾವೇರಿಯು ಕಾಣಿಸಿಕೊಂಡ ಕೊಡಗಿಗೆ ನೆರೆಯಾಗಿರುವ ಪ್ರದೇಶ (ಹಾಸನ ಜಿಲ್ಲೆ ಮತ್ತು ಅದಕ್ಕೆ ಒತ್ತಾಗಿರುವ ಮೈಸೂರು ಜಿಲ್ಲೆಯ ಭಾಗ) ಕಾವೇರಿಯ ದಾರಿಯಲ್ಲಿ ಮೊದಲ ಹೆಜ್ಜೆ. ಕಾವೇರಿಯ ನೆರವನ್ನು ಮೊದಲ ಹಂತದಲ್ಲೇ ಪಡೆದುಕೊಂಡು ಹೆಗ್ಗಳಿಕೆಯನ್ನು ಗಳಿಸಿಕೊಂಡ ಊರುಗಳು, ರಾಮನಾಥಪುರ, ಸಾಲಿಗ್ರಾಮ, ಹನಸೋಗೆ, ಚುಂಚನಕಟ್ಟೆ, ಕೃಷ್ಣರಾಜನಗರ ಇವು. ಇವುಗಳಲ್ಲಿ ರಾಮನಾಥಪುರ ತುಂಬ ಪ್ರಸಿದ್ಧವಾದುದು ; ಅದರ ವಿಚಾರವಾಗಿ ಈ ಮಾಲೆಯಲ್ಲಿ ಬೇರೆಯೇ ಪುಸ್ತಕವೊಂದು

ಬಂದಿದೆ. ರಾಮನಾಥಪುರವನ್ನು ಬಿಟ್ಟರೆ ಸಾಲಿಗ್ರಾಮ ಮುಖ್ಯವಾದ ಊರು ; ಇದಕ್ಕೆ ಹೊಂದಿಕೊಂಡೇ ಹನಸೋಗೆ, ಚುಂಚನಕಟ್ಟೆ. ಕೃಷ್ಣರಾಜನಗರವೇನೋ ಸ್ವಲ್ಪ ದೂರ ಸರಿಯಿತೆನ್ನಿ.

ಸಾಲಿಗ್ರಾಮ

ನಮ್ಮ ದೇಶದಲ್ಲಿ ಸಾಲಿಗ್ರಾಮವೆಂಬ ಹೆಸರಿನ ಊರುಗಳು ಹಲವಾರಿವೆ ; ಕನ್ನಡನಾಡಿನಲ್ಲೇ ಹತ್ತಾರು. ಊರುಗಳಿಗೆ ಈ ಹೆಸರು ಬರಲು ಕಾರಣವೇನು ? ಸಾಲಿಗ್ರಾಮದಂತೆ ಕಾಣುವ ಕಲ್ಲುಗಳು ಊರಿನ ಪಕ್ಕ ಹರಿಯುವ ನದಿಯಲ್ಲಿ ಹೇರಳವಾಗಿ ದೊರೆಯುವುದೇ ಕಾರಣ. ಸಾಲಿಗ್ರಾಮ ನೇಪಾಳ ರಾಜ್ಯದ ಗಂಡಕೀ ನದಿಯಲ್ಲಿ ದೊರೆಯುವ ನುಣ್ಣನೆಯ, ಕರಿಯ ಕಲ್ಲುಗಳು ; ಅವುಗಳಲ್ಲಿ ಡೊಗರಿದ್ದು ಅವುಗಳಲ್ಲಿ ಚಕ್ರ ಮೊದಲಾದ ಚಿಹ್ನೆಗಳಿರುವುದರಿಂದ ವಿಷ್ಣುವಿನ ಪ್ರತೀಕಗಳೆಂದು ಜನ ಭಾವಿಸಿ ಅವನ್ನು ಮನೆಗಳಲ್ಲಿ, ಮಠಗಳಲ್ಲಿ ಪೂಜಿಸುತ್ತಾರೆ. ದಿಟವಾದ ಸಾಲಿಗ್ರಾಮ ಶಿಲೆಗಳು ಬೇರೆಲ್ಲಿಯೂ ದೊರೆಯುವುದಿಲ್ಲ. ಆದರೆ ಸಾಲಿಗ್ರಾಮಗಳನ್ನೇ ಆಕಾರದಲ್ಲಿ ಬಣ್ಣದಲ್ಲಿ ಹೋಲುವ ಶಿಲೆಗಳು ಹಲವಾರು ಕಡೆ ಕಾಣಸಿಗುತ್ತವೆ. ನದಿಯ ಬಿರುಸಾದ ಹರಿವಿಗೆ ಪಕ್ಕಾಗಿ ನುಣ್ಣಗಾದ ಈ ಕಲ್ಲುಗಳಲ್ಲಿ ಜನ ವಿಶೇಷವನ್ನು ಕಂಡು, ಆ ಊರುಗಳನ್ನು

ಸಾಲಿಗ್ರಾಮ ಸ್ಥಳಗಳೆಂದೇ ಕರೆಯುವುದು ಆಶ್ಚರ್ಯ ವೇನಲ್ಲ. ಇಂಥ ಊರುಗಳಲ್ಲಿ ನಮ್ಮ ಸಾಲಿಗ್ರಾಮವೂ ಒಂದು.

ಸಾಲಿಗ್ರಾಮ, ಮೈಸೂರು ಜಿಲ್ಲೆಯಲ್ಲಿ ಕೃಷ್ಣರಾಜ ನಗರ (ಎಡತೊರೆ) ತಾಲ್ಲೂಕಿಗೆ ಸೇರಿರುವ ದೊಡ್ಡ ದೊಂದು ಹಳ್ಳಿ, ಅಥವಾ ಸಣ್ಣದೊಂದು ಊರು. ಕೃಷ್ಣ ರಾಜನಗರದಿಂದ ವಾಯುವ್ಯ ದಿಕ್ಕಿನಲ್ಲಿ ಹನ್ನೆರಡು ಮೈಲು ದೂರದಲ್ಲಿ ಕಾವೇರಿ ನದಿಯ ಉತ್ತರ ದಂಡೆಯ ಮೇಲಿದೆ. ಈಗ ಅದೊಂದು ಮುಖ್ಯವಾದ ವಾಣಿಜ್ಯ ಕ್ಷೇತ್ರ. ಜೈನ ಪಂಗಡಕ್ಕೆ ಸೇರಿದ ಗೃಹಸ್ಥರು ಹೆಚ್ಚು ಸಂಖ್ಯೆಯಲ್ಲಿರುತ್ತ ಹಿತ್ತಾಳೆ ಪಾತ್ರೆಗಳ ವ್ಯಾಪಾರವನ್ನು ನಡೆಸುತ್ತಾರೆ.

ಈ ಊರಿನ ಧಾರ್ಮಿಕ ಪ್ರಸಿದ್ಧಿ ಶ್ರೀವೈಷ್ಣವ ಸಂಪ್ರದಾಯದ ಆಚಾರ್ಯಪುರುಷರಾದ ರಾಮಾನುಜ ರಿಂದ ಒದಗಿಬಂದಿದೆ. ರಾಮಾನುಜಾಚಾರ್ಯರು (1017–1137) ತಮಿಳುನಾಡಿನವರು; ಹುಟ್ಟಿದ್ದು, ಬೆಳೆ ದದ್ದು ಕಾಂಚೀಪುರದಲ್ಲಿ, ಆಚಾರ್ಯರಾಗಿ ಇದ್ದದ್ದು ಶ್ರೀರಂಗದಲ್ಲಿ. ಆ ಕಾಲಕ್ಕೆ ಶ್ರೀರಂಗ ಶ್ರೀವೈಷ್ಣವ ಸಮು ದಾಯಕ್ಕೆ ಜೀವನಾಡಿಯಂತಿದ್ದ ಕ್ಷೇತ್ರ. ಈ ಕ್ಷೇತ್ರದ ಕಣ್ಣು ಅಲ್ಲಿನ ರಂಗನಾಥ ದೇವಾಲಯ ; ಅಲ್ಲಿನ ಸಮು ದಾಯಕ್ಕೆ ಚೇತನ ರಾಮಾನುಜರಿಂದ. ಅವರು ತಮಿಳು ನಾಡನ್ನು ತೊರೆದು ಕನ್ನಡನಾಡಿಗೆ ಬಂದಿದ್ದರೆಂದು ಒಂದು ಪ್ರತೀತಿಯಿದೆ. ಅದಕ್ಕೆ ಐತಿಹಾಸಿಕವಾಗಿ ಆಧಾರವೇನೂ ದೊರೆಯುವುದಿಲ್ಲ. ಪ್ರತೀತಿಯ ಪ್ರಕಾರ, ಶೈವಪಕ್ಷಪಾತಿ

ಯಾದ ಚೋಳವಂಶದ ಅರಸ ಮೊದಲನೆಯ ಕುಲೋತ್ತುಂಗನು(ಇವನನ್ನು ಕೃಮಿಕಂಠನೆಂದೂ ಕರೆಯುವುದಿದೆ) ಶ್ರೀರಂಗದ ಶ್ರೀವೈಷ್ಣವ ಸಮುದಾಯವನ್ನು ಹಿಂಸೆಪಡಿಸತೊಡಗಿದನಂತೆ. ರಾಮಾನುಜರು ವೇಷಮರೆಸಿಕೊಂಡು ತಮ್ಮ ಶಿಷ್ಯರೊಂದಿಗೆ ಹೊಯ್ಸಳರ ನಾಡಿಗೆ ಓಡಿಬಂದರಂತೆ. ಹೊಯ್ಸಳರ ರಾಜಧಾನಿಯಾದ ತೊಂಡನೂರಿಗೆ ಬಂದು ಜೈನ ರಾಜನಾಗಿದ್ದ ಬಿಟ್ಟಿದೇವನನ್ನು ಶ್ರೀವೈಷ್ಣವ ಧರ್ಮಕ್ಕೆ ಒಲಿಸಿಕೊಂಡರಂತೆ. ಶ್ರೀವೈಷ್ಣವ ಧರ್ಮವನ್ನು ಪ್ರಚಾರಮಾಡುತ್ತ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಹನ್ನೆರಡು ವರ್ಷಗಳ ಕಾಲ ತಂಗಿದ್ದರಂತೆ. ಯಾದವಾದ್ರಿಯೆಂದು ಹೆಸರಾದ ಮೇಲುಕೋಟೆ ತಿರುನಾರಾಯಣಪುರಿಯೆಂದು ದಿವ್ಯಕ್ಷೇತ್ರವಾದುದು ಹೀಗೆ ಎಂದು ವಿವರಣೆ. ತಮಿಳುನಾಡಿನಿಂದ ಹೊರಟು ಕನ್ನಡ ನಾಡಿನಲ್ಲಿ ಕಾಲಿಡುವಾಗ ಮೊದಲಲ್ಲೇ ಸಾಲಿಗ್ರಾಮಕ್ಕೆ ಬಂದಿದ್ದರಂತೆ.

ಚೋಳರಾಜನಿಗೆ ಬೆದರಿ ತಮ್ಮ ನೆಲೆಯಿಂದ ಅವರು ಕಾಲು ತೆಗೆದದ್ದು ಕ್ರಿಸ್ತಾಬ್ದ 1078–1079ರ ಸಮಯವೆಂದು ಹೇಳುತ್ತಾರೆ. ಬಿಟ್ಟಿದೇವನನ್ನು ವಿಷ್ಣುವರ್ಧನನನ್ನಾಗಿ ಮಾರ್ಪಡಿಸಿದ್ದು 1099ರಲ್ಲಿ ಎಂದು ಟಿ. ಗೋಪೀನಾಥರಾಯರೂ, 1117ರಲ್ಲಿ ಎಂದು ಲೂಯಿರೈಸರೂ ಎಣಿಸಿದ್ದಾರೆ. ಆದರೆ ಚೋಳರಾಜನ ಬಾಧೆ ಇದ್ದುದಕ್ಕಾಗಲೀ, ರಾಮಾನುಜರು ತಾಯಿನಾಡನ್ನು ತೊರೆದು ಇಲ್ಲಿಗೆ ಓಡಿಬಂದುದಕ್ಕಾಗಲೀ ಪ್ರತೀತಿಯನ್ನು ಬಿಟ್ಟು ಬೇರೆ

ಯಾವ ಆಧಾರವೂ ಇರದು. ರಾಮಾನುಜರಿಗೂ ಮೇಲು ಕೋಟೆಗೂ ಇರುವ ನೆಂಟೇ ಹೀಗೆ ಸಂಶಯಾಸ್ಪದ ವಾದುದು ಎಂದಮೇಲೆ ಅವರು ಸಾಲಿಗ್ರಾಮಕ್ಕೆ ಬಂದು ಅಲ್ಲಿ ಕೆಲಕಾಲ ತಂಗಿದ್ದರು ಎನ್ನುವುದಕ್ಕೆ ಯಾವ ಆಧಾರ ವಿದೆಯೋ, ಎಷ್ಟು ವಿಶ್ವಾಸಾರ್ಹವೋ ತಿಳಿಯದು.

ಇದು ಇತಿಹಾಸದ ಮಾತಾಯಿತು, ಅತ್ತ ಇರಲಿ. ಜನರ ನಂಬಿಕೆಯಂತೆ, ರಾಮಾನುಜರು ಕನ್ನಡನಾಡಿಗೆ ಕಾಲಿಟ್ಟು ಸಾಲಿಗ್ರಾಮಕ್ಕೆ ಬಂದರೆಂದು, ಅವರು ಅಲ್ಲಿಗೆ ಬಂದಿದ್ದರ ಕುರುಹಾಗಿ ಶ್ರೀಪಾದತೀರ್ಥವನ್ನೂ ಶ್ರೀಪಾದ ಸನ್ನಿಧಿಯನ್ನೂ ತೋರಿಸುತ್ತಾರೆ. ರಾಮಾನುಜರು ಬಳಸು ತ್ತಿದ್ದ ಪುಷ್ಕರಿಣಿಯಲ್ಲಿ ಇಂದು ಯಾರೂ ಮಿಾಯು ವಂತಿಲ್ಲ, ಅದನ್ನು ಯಾರೂ ಮುಟ್ಟುವಂತಿಲ್ಲ. ಅದಕ್ಕೆ ಶ್ರೀಪಾದತೀರ್ಥವೆಂದು (ರಾಮಾನುಜ ಪುಷ್ಕರಿಣಿಯೆಂದು) ಪೂಜೆ ಸಲ್ಲುತ್ತದೆ; ಅರ್ಚಕರಿಂದ ಇದರ ನೀರನ್ನು ಶ್ರೀಪಾದ ತೀರ್ಥವೆಂದು ಭಕ್ತರು ಪಡೆದುಕೊಳ್ಳುತ್ತಾರೆ. ಈ ಪುಷ್ಕರಿ ಣಿಯ ಬಳಿಯೇ ರಾಮಾನುಜರ ಪಾದಗಳೆಂದು ಕಲ್ಲಿನ ಪೀಠವೊಂದರ ಮೇಲೆ ಪ್ರತೀಕವೊಂದಿದೆ. ಇದನ್ನು ರಾಮಾನುಜರ ನೇರವಾದ ಶಿಷ್ಯ ವಡುಕನಂಬಿಯು ಗುರು ಗಳ ಪಾದಚಿಹ್ನೆಯ ಜಾಡನ್ನೇ ಕಲ್ಲಿನಲ್ಲಿ ಕಡೆದಿರಿಸಿದನಂತೆ. ಈ ಶ್ರೀಪಾದಸನ್ನಿಧಿಯ ಹಿಂದೆ ಗೋಡೆಯ ಮೇಲೆ ಶಂಖ–ಚಕ್ರಗಳೂ, ನಡುವೆ ಶ್ರೀನಾಮವೂ ಇರುವಂಥ ಚಿತ್ರಣ ಇದೆ. ಈ ಸನ್ನಿಧಿಗೆ ಪೂಜೆ ಸಲ್ಲುತ್ತದೆ. ಸನ್ನಿಧಿಯ ತಿರುವಡಿಗಳ ಮೇಲೆ ಕಾವಿ ಬಣ್ಣವನ್ನು ಬಳಿದು ಬಿಳಿಬಟ್ಟೆ



ಶ್ರೀಪಾದ ತೀರ್ಥ

ಶ್ರೀಪಾದ ಸನ್ನಿಧಿ

ಯಲ್ಲಿ ಅದರ ಪ್ರತಿಕೃತಿಗಳನ್ನು ತೆಗೆದು ಭಕ್ತರಿಗೆ ಕೊಡುವ ಪದ್ಧತಿಯೂ ಇಲ್ಲಿದೆ.

ಸಾಲಿಗ್ರಾಮದಲ್ಲಿರುವ ಗುಡಿಗಳಲ್ಲಿ ಪ್ರಮುಖ ವಾದುದು ಯೋಗಾನರಸಿಂಹನದು. ಇಲ್ಲಿ ಯೋಗಪಟ್ಟ ವನ್ನು ಹಿಡಿದು ಕುಳಿತಿರುವ ಕೇವಲ ನರಸಿಂಹನ ಶಿಲಾ ಪ್ರತಿಮೆ ಭವ್ಯವಾಗಿದೆ. ಪಾದಪೀಠದಲ್ಲಿ ವಾಹನಭಂಗಿ ಯಲ್ಲಿರುವ ಗರುಡನ ಚಿತ್ರಫಲಕವಿದೆ. ಬೇರೆಡೆ ಇರುವ ಮಹಾಲಕ್ಷ್ಮಿಯ ಶಿಲಾವಿಗ್ರಹವೂ ಉತ್ಸವಮೂರ್ತಿಯೂ ಸೊಗಸಾದ ಕಲಾಕೃತಿಗಳು. ಸಾಲಿಗ್ರಾಮದಲ್ಲಿನ ಮೂರ್ತಿ ಶಿಲ್ಪಗಳ ಹಿರಿಮೆಯನ್ನು ಮನವರಿಕೆ ಮಾಡಿ ಕೊಳ್ಳಬೇಕೆಂದರೆ ಸತ್ಯಭಾಮೆಯದೆನ್ನುವ ಪಂಚಲೋಹದ ಪುತ್ಥಳಿಯನ್ನು ನೋಡಬೇಕು. ಚೋಳಶೈಲಿಯ ಪ್ರತಿ ಕೃತಿಯಂತೆ ಇದ್ದರೂ, ಚೋಳವಲ್ಲದ ವಿವರಗಳನ್ನು ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ನಾಡಿನ ಅತ್ಯುತ್ತಮ ಮೂರ್ತಿಶಿಲ್ಪಗಳಲ್ಲಿ ಇದೊಂದು ಎನ್ನಬಹುದು.

ಹಾಗೆಯೇ ಮನೋಜ್ಞವಾದ ಇನ್ನೊಂದು ಕೃತಿ ರಾಮಾನುಜಾಚಾರ್ಯರ ಉತ್ಸವವಿಗ್ರಹ. ಇದರ ಚೆಲು ವನ್ನು ನೋಡಿಯೇ ಅರಿತುಕೊಳ್ಳಬೇಕು. ಕುಳಿತಿರುವ ಭಂಗಿ ದೃಢಸುಂದರವಾಗಿದೆ; ಮುಖದಲ್ಲಿ ಮೂಡಿರುವ ಮಂದಹಾಸ ತುಂಬ ಆಕರ್ಷಕವಾಗಿದೆ. ಇದಕ್ಕೆ ಮೂಲವ ರೆನ್ನುವ ಶಿಲಾವಿಗ್ರಹ ಕಲೆಯ ದೃಷ್ಟಿಯಿಂದ ಉತ್ಸವ ವಿಗ್ರಹಕ್ಕೆ ಅಪವಾದ! ಇದರ ಜಾಡನ್ನೇ ಹಿಡಿದು ಮಾಡಿ

ಸಾಲಿಗ್ರಾಮದ ಯೋಗಾನರಸಿಂಹ

ಸಾಲಿಗ್ರಾಮದ ಸತ್ಯಭಾಮೆ

ರುವ ಇನ್ನೊಂದು ಲೋಹಪುತ್ಥಳಿಯೂ ಅದರ ಬದಿಯಲ್ಲಿಯೇ ಇದೆ.

ರಾಮಾನುಜರು ಇಲ್ಲಿಗೆ ಬಂದರೆಂದು ಸೂಚಿಸುವ ಕಾಲಕ್ಕೆ ಮೊದಲೇ ಇದು ಪ್ರಸಿದ್ಧ ಕ್ಷೇತ್ರವಾಗಿದ್ದಿತೆಂದೂ, ಈ ಪ್ರಸಿದ್ಧಿಯನ್ನು ಕೇಳಿಯೇ ರಾಮಾನುಜರು ಕಾವೇರೀ ತೀರದ ರಂಗನಾಥನನ್ನು ಬಿಟ್ಟು ಈ ಕಾವೇರಿ ತೀರಕ್ಕೆ ಬರಲೊಪ್ಪಿದರೆಂದೂ ಪ್ರತೀತಿಯಿದೆ. ಮೊದಲಿಂದ ಇದು ಗೌತಮಕ್ಷೇತ್ರವಂತೆ; ಗೌತಮಋಷಿಗಳೇ (?) ಇಲ್ಲಿ ನೆಲೆಸಿ ತಪಸ್ಸನ್ನು ಮಾಡಿಕೊಂಡಿದ್ದು ಮುಕ್ತಿಯನ್ನು ಪಡೆದರಂತೆ. ಇದನ್ನು ದೃಢಪಡಿಸಲೆಂದು ಗೌತಮ ಪುಷ್ಕರಿಣಿಯೊಂದನ್ನು ತೋರಿಸುತ್ತಾರೆ. ಜಾಲಮರಿಯೆಂಬ ಹೆಸರೂ ಈ ಊರಿಗಿದ್ದಿತೆಂದು ತಿಳಿದುಬರುತ್ತದೆ. ಈ ಮಾತಿಗೆ ಅರ್ಥವೇನೋ ತಿಳಿಯದು.

ಹನಸೋಗೆ

ಸಾಲಿಗ್ರಾಮದ ನೆರೆಯಲ್ಲಿಯೇ ಇರುವ ಊರು ಹನಸೋಗೆ. ಈಗ ಇದೊಂದು ಸಣ್ಣ ಹಳ್ಳಿ. ನೇರವಾಗಿ ಕಾವೇರೀ ನದಿಯ ದಡದ ಮೇಲೇ ಇದ್ದರೂ ಅಷ್ಟಾಗಿ ಸಮೃದ್ಧಿಯನ್ನೇನೂ ಸೂಚಿಸದಿರುವ ಹಳ್ಳಿ. ನದಿಗೆ ಕಲ್ಲಿನ ಸೋಪಾನಗಳಿದ್ದು, ದಡದ ಮೇಲೇ ನದಿಗೆ ಮುಖಮಾಡಿ ಮೂರು ದೇವಾಲಯಗಳಿವೆ. ಊರಿಗೇ ಹೊಂದಿ

ಕೊಂಡಂತೆ ಶ್ರೀನಿವಾಸರ ಗುಡಿ ; ವರ್ಷಕ್ಕೊಮ್ಮೆ ಈ ದೇವರಿಗೆ ರಥೋತ್ಸವವೂ ನಡೆಯುತ್ತದೆ. ಈ ಗುಡಿಯ ಪಕ್ಕದಲ್ಲಿ ಸಾಲಾಗಿ ರಾಘವೇಂದ್ರ ಸ್ವಾಮಿಗಳ ಮಠ, ಶಿವಾಲಯಗಳಿವೆ.

ನದಿಯ ದಡದ ಮೇಲಿರುವ ಊರನ್ನು ಈಗ ದೊಡ್ಡ ಹನಸೋಗೆಯೆಂದೂ, ನದಿಗೆ ಸುಮಾರು ದೂರದಲ್ಲಿ, ಈ ಊರಿಂದ ಬಿಡಿಸಿದಂತೆ ಇರುವ ಇನ್ನೊಂದು ಊರನ್ನು ಚಿಕ್ಕಹನಸೋಗೆಯೆಂದೂ ಕರೆಯುತ್ತಾರೆ. ಐತಿಹಾಸಿಕವಾಗಿ ಚಿಕ್ಕಹನಸೋಗೆಯೇ ಮುಖ್ಯವಾದುದು. ಇಲ್ಲಿರುವ ಪುರಾತನ ತ್ರಿಕೂಟ ಬಸದಿ ಇದು ಜೈನಕೇಂದ್ರವಾಗಿದ್ದಿತೆಂದು ಸ್ಪಷ್ಟಪಡಿಸುತ್ತದೆ. ಮೊದಲಿಗೆ ಚಿಕ್ಕಹನಸೋಗೆಯೇ ಹನಸೋಗೆ ; ದೊಡ್ಡ ಹನಸೋಗೆ ಮೈದಳೆದದ್ದು ಅನಂತರ. ಕಾಲಕ್ರಮದಲ್ಲಿ ಚಿಕ್ಕಹನಸೋಗೆ ಪಾಳುಬಿದ್ದಿತು.

ಹನಸೋಗೆ ಮೊದಲಿಗೆ ಹಾಸನಜಿಲ್ಲೆಯ ಅರಕಲಗೂಡು ತಾಲ್ಲೂಕಿಗೆ ಸೇರಿದ್ದು. **1882**ರಲ್ಲಿ ಮೈಸೂರು ಜಿಲ್ಲೆಯ ಕೃಷ್ಣರಾಜನಗರ (ಎಡತೊರೆ) ತಾಲ್ಲೂಕಿಗೆ ವರ್ಗಾಯಿಸಲ್ಪಟ್ಟಿತು. ಹ ನ ಸೋ ೀ ಗೆ ಯ ಹಿಂದಣ ಪ್ರಾಮುಖ್ಯವನ್ನು ಹೇಳುವಂತೆ, ಆ ಗಿ ನ ಸರಕಾರವು ರೆವಿನ್ಯೂ ಸೆಟಲ್‌ಮೆಂಟನ್ನು **1804**ರಲ್ಲಿ ಹನಸೋಗೆಗೇ ಮೊದಲು ಅನ್ವಯಿಸಿ, **1885**ರಲ್ಲಿ ತಾಲ್ಲೂಕಿನ ಇತರ ಹಳ್ಳಿಗಳಲ್ಲಿ ಜಾರಿಗೆ ತಂದಿತು.

ಹನಸೋಗೆ ಅರಕಲಗೂಡು ತಾಲ್ಲೂಕಿಗೆ ಸೇರಿದ್ದಿ

ಹನಸೋಗೆಯ ಬಸದಿ – ಕಿರುನೋಟ



ಹನಸೋಗೆಯ ಬಸದಿ – ರಂಗಮಂಟಪ

ತೆಂದೆವಲ್ಲ. ಹಾಸನಕ್ಕೆ ದಕ್ಷಿಣದಲ್ಲಿ ಹದಿನೇಳು ಮೈಲು ದೂರ ಇರುವ ಅರಕಲಗೂಡು 1647ರವರೆಗೂ ಬಲಂ ಸೀಮೆಗೆ ಸೇರಿದ್ದಿತು. ಹಾಸನ ಜಿಲ್ಲೆಯ ಬೇಲೂರು ಸುತ್ತಮುತ್ತ ಇರುವ ಪ್ರದೇಶವನ್ನು ಬಲಂ ಸೀಮೆಯೆಂದು ಕರೆಯು (ಈಗಿನ ಮಂಜಿರಾಬಾದಿಗೆ ಮೊದಲು ಬಲಂ ಎಂಬ ಹೆಸರಿದ್ದಿತಂತೆ), ವಿಜಯನಗರದ ಅರಸರು ಅದನ್ನು ಮೊದಲು ವೀಣ ರಾಮಪ್ಪ ಎಂಬುವನ ಆಳ್ವಿಕೆಗೂ ಅನಂತರ ಐಗೂರು ನಾಯಕರ ವಶಕ್ಕೂ ಸಲ್ಲಿಸಿದರು. ಅರಕಲಗೂಡು ಊರನ್ನು ಕಟ್ಟಿದವನು ಐಗೂರು ಕೃಷ್ಣಪ್ಪ ನಾಯಕ; ಸದಾಶಿವರಾಯನು ವಿಜಯನಗರದ ದೊರೆಯಾಗಿದ್ದಾಗ. 1647ರಲ್ಲಿ (ಶಕ 1570 ಸರ್ವಜಿತು ಜ್ಯೇಷ್ಠ ಶುದ್ಧ ಪಾಡ್ಯದಂದು) ಮೈಸೂರು ಅರಸರಾದ ಕಂಠೀರವ ನರಸರಾಜ ಒಡೆಯರು ಅರಕಲಗೂಡು ಕೃಷ್ಣಪ್ಪನಾಯಕನಿಂದ ಬಸವಾಪಟ್ಟಣ, ಬೆಟ್ಟದಪುರ, ಕಣ್ಣಾಗಾಲ, ಕಿತ್ತೂರುಗಳನ್ನು ವಶಪಡಿಸಿಕೊಂಡರೆಂದು ದಾಖಲೆಯಿದೆ. ಇಕ್ಕೇರಿಯ ಶಿವಪ್ಪನಾಯಕನು ಈ ಬಲಂ ಸೀಮೆಯನ್ನು ಗೆದ್ದು, ವಿಜಯನಗರದ ಅರಸರು ರಾಜ್ಯ ಕಳೆದುಕೊಂಡು ಅಲೆದಾಡುತ್ತಿದ್ದಾಗ ಅವರಿಗೆ ಕೊಟ್ಟನೆಂದೂ ತಿಳಿದು ಬರುತ್ತದೆ. ಶಕ 1613ರಲ್ಲಿ (ಎಂದರೆ ಕ್ರಿ.ಶ. 1690ರಲ್ಲಿ) ಚಿಕ್ಕದೇವರಾಜ ಒಡೆಯರು ಈ ಪ್ರದೇಶವನ್ನು ಗೆದ್ದು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು. ಅಂದಿನಿಂದ ಇದು ಈ ರಾಜ್ಯದಲ್ಲೇ ಉಳಿದಿದೆ. ಈ ತಾಲ್ಲೂಕಿನಲ್ಲಿ ರೆವಿನ್ಯೂ ಸೆಟಲ್‌ಮೆಂಟನ್ನು 1883ರಲ್ಲಿ ಪ್ರಾರಂಭಿಸಿ 1885ರಲ್ಲಿ

ಪೂರಾ ಜಾರಿ ಮಾಡಿದರು. ಈ ಸೆಟಲ್‌ಮೆಂಟಿನ ಪ್ರಯೋಗ ನಡೆದದ್ದು ಹನಸೋಗೆಯಲ್ಲೇ; 1804ರಷ್ಟು ಹಿಂದೆಯೇ.

ಹನಸೋಗೆ ಸುತ್ತ ಇಪ್ಪತ್ತೈದು ಮೈಲುಗಳಷ್ಟು ದೂರ ಪ್ರದೇಶ ಹತ್ತನೆಯ ಹನ್ನೊಂದನೆಯ ಶತಮಾನಗಳಷ್ಟು ಹಿಂದೆಯೇ ಸುಪ್ರಸಿದ್ಧ ಜೈನ ಕ್ಷೇತ್ರವಾಗಿದ್ದಿತು. ಈ ಪ್ರದೇಶವನ್ನು ಆಳುತ್ತಿದ್ದ ಚೆಂಗಾಳ್ವರು ಜೈನರು. ಇವರು ಕೊಡಗು, ಈಗಿನ ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕು, ಕೃಷ್ಣರಾಜನಗರದ ದಕ್ಷಿಣ ಭಾಗಗಳ ಮೇಲೆ ಆಡಳಿತ ನಡೆಸುತ್ತಿದ್ದವರು. 'ಕುಡಊಗೂರು ನಾಡು' (ಎಂದರೆ ಈಗಿನ ಕೊಡಗು ಮತ್ತು ನೆರೆನಾಡು) ಎಂಬ ಪ್ರದೇಶಕ್ಕೇ ಪುನ್ನಾಟವೆಂದು ಮೊದಲಿಗೆ ಹೆಸರಿದ್ದಿತೆಂದೂ, ಅದರ ಮುಖ್ಯವಾದ ಊರೆಂದರೆ ಪುಂಗಿಸೋಗೆ (ಈಗಿನ ಹನಸೋಗೆ) ಎಂದೂ ಒಂದು ಒಕ್ಕಣೆಯಿದೆ. ಇದು ಎಂಟನೆಯ ಶತಮಾನದವರೆಗೂ ಜೈನಧರ್ಮದ ಪ್ರಾಬಲ್ಯವನ್ನು ಕಂಡ ಪ್ರದೇಶ.

ಇದರ ಹಿನ್ನೆಲೆಯನ್ನು ಕೊಂಚ ಹೇಳಬೇಕೆಂದರೆ– ಶ್ರವಣಬೆಳಗೊಳದಲ್ಲಿ ಮೂರು ಮುನಿಸಂಘಗಳಿದ್ದುವು. ಕೆಲಟೂರು ಸಂಘ, ನವಿಲೂರ ಸಂಘ (ಮಯೂರ ಸಂಘ ಅಥವಾ ಗ್ರಾಮಸಂಘ) ಮತ್ತು ಶ್ರೀಮೂಲ ಸಂಘ. ಇವುಗಳಲ್ಲಿ ಮುಖ್ಯವಾದುದು ಶ್ರೀಮೂಲ ಸಂಘ ; ಅದೇ ಮೂಲ ಸಂಘವಾದುದರಿಂದ. ಮಹಾವೀರನಿಂದಲೆ ನೇರವಾದ ಪರಂಪರೆಯಲ್ಲಿ ಭದ್ರಬಾಹುವನ್ನೂ ಪೂರ್ವಾಚಾರ್ಯನಾಗಿ ಪಡೆದುಕೊಂಡದ್ದೆಂದು ಅದರ ಹಿರಿಮೆ.

ಈ ಮೂಲಸಂಘದ ಕುಂದಕುಂದಾನ್ವಯ ಪುಸ್ತಕಗಚ್ಛದ ಮುನಿಗಳು ಈ ಕಡೆಯಲ್ಲೆಲ್ಲ ಪ್ರಭಾವಶಾಲಿಗಳು. ಶ್ರವಣ ಬೆಳಗೊಳದ ಮಠಕ್ಕೆ ಮುಖ್ಯಸ್ಥನಾಗಿದ್ದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಈ ಗುಂಪಿನ ಮುನಿಯೇ.

ಚೆಂಗಾಳ್ವ ಅರಸರು ಈ ಗುಂಪಿನ ಮುನಿಗಳ ಶಿಷ್ಯರು. ಅವರಲ್ಲಿ ಮೊದಲ ಅರಸನಾದ ನನ್ನಿ-ಚೆಂಗಾಳ್ವ ರಾಜೇಂದ್ರ ಚೋಳನೆಂಬುವನು 1080ರಲ್ಲೇ ಹನಸೋಗೆಯಲ್ಲಿ (ಈಗಿನ ಚಿಕ್ಕಹನಸೋಗೆಯಲ್ಲಿ) ಆದಿನಾಥ ತೀರ್ಥಂಕರರ ಬಸದಿ ಯೊಂದನ್ನು ಕಟ್ಟಿಸಿ, ಅಲ್ಲಿ ಹನಸೋಗೆ ಗುರುಶಾಖೆ ('ಹನಸೋಗೆ-ಬಳಿ' ಯೆಂದು ಅದರ ಹೆಸರು) ಒಂದನ್ನು ಏರ್ಪಡಿಸಿದನು. ಈ ಮುನಿಗಳು ಕುಂದಕುಂದಾನ್ವಯ, ಮೂಲ ಸಂಘ, ದೇಸಿಗಣ, ಪುಸ್ತಕ ಗಚ್ಛದವರೆಂಬ ಒಕ್ಕಣೆ ಈ ಬಸದಿಯ ಶಾಸನಗಳಲ್ಲಿವೆ. ಈ ಆದೀಶ್ವರ ಬಸದಿಯ ಬಲಬಾಗಿಲಿನ ತೊಲೆಯ ಮೇಲೆ ಹಳಗನ್ನಡದಲ್ಲಿ–

> 'ಶ್ರೀ ಕೊಂಡ ಕುಂದಾನ್ವಯ ದೇಸಿಯ ಗಣ ಪುಸ್ತಕಗಚ್ಛದ
> ಶ್ರೀ ದಿವಾಕರಣನ್ದಿ ಸಿದ್ಧಾಂತದೇವರ ಜೇಷ್ಠಗುರುಗಳಪ್ಪ
> ದಾಮನನ್ದಿ ಭಟ್ಟಾರಕರ ಸಂಬನ್ಧಿ ಈ ಪನಸೋಗೆಯ
> ಚಂಗಾಳ್ವ ತೀರ್ಥದೆಲ್ಲಾ ಬಸದಿಗಳುಂ ಮುಬ್ಬೆಯ ಬಸದಿಯುಂ
> ತೊರೆನಾಡರ್ಬೆಳಿವಣಿಯ ಬಸದಿಯು ತತ್ಸಮುದಾಯ ಮುಖ್ಯಂ

ಎಂಬ ಬರಹವಿದೆ. ದಾಮನಂದಿಯೆಂಬ ಯತಿ ಆಗ ಆಚಾರ್ಯನಾಗಿದ್ದಂತೆ ತೋರುತ್ತದೆ. ಮತ್ತು ಅಲ್ಲೇ 'ಶ್ರೀವೀರರಾಜೇಂದ್ರ ನಂನ್ನಿ ಚಂಗಾಳ್ವದೇವಮ್ಮಾಡಿಸಿದ ಪುಸ್ತಕಗಚ್ಛದ ಬಸದಿ' ಎಂಬ ಉಲ್ಲೇಖವೂ ಇದೆ.



ಹನಸೋಗೆಯಲ್ಲಿರುವ ಒಂದು ಶಿಲಾಶಾಸನ

ಚೆಂಗಾಳ್ವರನ್ನು 'ಮಹಾ ಮಂಡಳಿಕ', 'ಮಂಡಳೇಶ್ವರ' ಎಂದು ಕರೆದಿರುವ ಶಾಸನಗಳು ಅನೇಕ ಇವೆ. ಆದರೆ ಈ ಅರಸರ ಶಾಸನಗಳೆಲ್ಲ ದೊರೆತಿರುವುದು ಕೃಷ್ಣರಾಜನಗರ (ಎಡತೊರೆ) ತಾಲ್ಲೂಕಿನಲ್ಲಿ ಮತ್ತು ಹುಣಸೂರು ತಾಲ್ಲೂಕಿನಲ್ಲಿ; ಲಕ್ಷ್ಮಣತೀರ್ಥ ನದಿಯ ಪಶ್ಚಿಮದ ಕಡೆ. ಈ ಅರಸರು ಮೈಸೂರು ಜಿಲ್ಲೆಯ ಪಶ್ಚಿಮಭಾಗ ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಆಳುತ್ತಿದ್ದಂತೆ ತೋರುತ್ತದೆ. ಮೊದಲಿಗೆ ಜೈನರಾಗಿದ್ದು ಅನಂತರ ಶೈವಧರ್ಮಕ್ಕೆ ಒಲಿದಂತೆಯೂ ಕಾಣುತ್ತದೆ.

ಹನಸೋಗೆಯೊಂದರಲ್ಲೇ ಅರವತ್ತುನಾಲ್ಕು ಬಸದಿಗಳಿದ್ದುವಂತೆ; ಇವಲ್ಲದೆ ನೆರೆಯ ಭುವನಹಳ್ಳಿ, ರಾವಂದೂರು, ಹನ್ನೇನಲ್ಲಿ, ಕಲ್ಲುಹಳ್ಳಿ, ಆನೇವಾಳು ಮೊದಲಾದ ಕಡೆಗಳಲ್ಲೆಲ್ಲ ಅನೇಕ ಬಸದಿಗಳಿದ್ದಂತೆ ತಿಳಿದುಬರುತ್ತದೆ. ಹನಸೋಗೆಯಲ್ಲಿ ಈಗ ತ್ರಿಕೂಟ ಬಸದಿಯಿದೆ. ಎಂದರೆ ಮೂವರು ತೀರ್ಥಂಕರರ ಪೂಜೆಗೆ ಸಿದ್ಧಪಡಿಸಿದ ತಾಣ. ಇಲ್ಲಿನ ಮೂವರು ತೀರ್ಥಂಕರರು ಆದಿನಾಥ (ಋಷಭದೇವ), ನೇಮಿನಾಥ, ಶಾಂತೀಶ್ವರ, ಆದೀಶ್ವರ ಅಥವಾ ಆದಿನಾಥನ ಮೂರ್ತಿಯನ್ನು ದಶರಥರಾಜನ ಮಗ ಶ್ರೀರಾಮನೇ ಪ್ರತಿಷ್ಠೆ ಮಾಡಿ ಪೂಜೆ ಮಾಡಿದನೆಂದೂ ಚೆಂಗಾಳ್ವ ಅರಸನು ಅದನ್ನೇ ಜೀರ್ಣೋದ್ಧಾರ ಮಾಡಿದನೆಂದೂ ಉಲ್ಲೇಖವಿದೆ. ಶಾಂತೀಶ್ವರ ಬಸದಿ ಬಾಗಿಲಿನ ತೊಲೆಯ ಮೇಲೆ ಹಳಗನ್ನಡದಲ್ಲಿ–



ಹನಸೋಗೆಯ ಬಸದಿ – ಶಿಲಾಶಾಸನ

> 'ದಶರಥಸುತನುಂ ಲಕ್ಷ್ಮಣಾಗ್ರಜನುಂ ಸೀತಾವಲ್ಲಭನುಂ ಇಕ್ಷ್ವಾಕುಕುಳಜನುಮಪ್ಪ ರಾಮನ ಪ್ರತಿಷ್ಠೆ ದೇಸಿಗಣದ ಬಸದಿಯಲ್ಲಿ ರಾಮರ್ಮ್ಮಾಡೆ ಗಂಗಪ್ರ್ರಡಿಸಲಿಸೆ ಬಂದ ತೀರ್ತ್ಥದ ಬಸದಿಯುಂ ಯಾದವರಪ್ಪ ಚಂಗಾಳ್ವರೊಳಗೆ ಶ್ರೀ ರಾಜೇಂದ್ರಚೋಳ ನನ್ನಿಚಂಗಾಳ್ವದೇವಪ್ರರ್ನರ್ನವಂ ಮಾಡಿದರೀ ಪನಸೋಗೆಲ್ದೇಸಿಗಗಣದ ಹೊತ್ತಗೆಗಚ್ಚದ ಬಸದಿ. ಕ್ಕೆ ತಲೆ ಕಾವೇರಿಯ ಬಸದಿಗಳ್ಗಂತತ್ಸಮುದಾಯ ಮುಖ್ಯಂ'

ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಹನಸೋಗೆಯ ಈ ಬಸದಿಯನ್ನು 'ರಾಜೇಂದ್ರಚೋಳ ಜಿನಾಲಯ' ವೆಂದೇ ಕರೆದಿದ್ದಾರೆ. ಚಂಗಾಳ್ವಚೋಳರೂ ಹೊಯ್ಸಳರೂ ಸೆಣಸುತ್ತಿದ್ದಾಗ ಹನಸೋಗೆ ಮುಖ್ಯವಾದ ಪಾತ್ರವನ್ನು ವಹಿಸಿದ್ದಂತೆ ಕಾಣುತ್ತದೆ. ಇಲ್ಲಿಯ ಜೈನ ಗುರುಗಳು ತುಂಬ ಪ್ರಭಾವಶಾಲಿಗಳಾಗಿದ್ದರು. ಅದರಲ್ಲೂ 'ಶ್ರೀಧರದೇವರ ಶಿಷ್ಯ ರೇಳಾಚಾರ್ಯರವರ ಶಿಷ್ಯರ್ದ್ದಾಮನನ್ದಿ ಭಟ್ಟಾರಕರವರ ಸಾಧರ್ಮ್ಮಿಗಳ್ಚಂದ್ರಕೀರ್ತಿ ಭಟ್ಟಾರಕರವರ ಶಿಷ್ಯರ್ದಿವಾಕರಣನ್ದಿ ಸಿದ್ಧಾಂತದೇವರವರ ಶಿಷ್ಯಚ್ಛಾಂದ್ರಾಯಣದೇವಾಪರ ನಾಮಧೇಯರಪ್ಪ ಶ್ರೀಮಜ್ಜಯ ಕೀರ್ತಿ ದೇವರಾದಿಯಾಗಾ ಸಮುದಾಯಂ ಮುಖ್ಯಮಿಾ ಬಸದಿಗಳೆಲ್ಲವರ್ಕ್ಕೆ' ಎಂಬ ಒಕ್ಕಣೆಯನ್ನು ನೋಡಿದರೆ ಜಯಕೀರ್ತಿಯೆಂಬ ಆಚಾರ್ಯರ ಪ್ರಖ್ಯಾತಿಯ ಅರಿವಾಗುತ್ತದೆ (ಹನಸೋಗೆಯ ನೇಮಿಾಶ್ವರ ಬಸದಿಯ ಬಾಗಿಲಿನ ತೊಲೆಯ ಮೇಲೆ 'ರಾಮಸ್ವಾಮಿ ಬೆಟ್ಟ ಪರಮೇಶ್ವರದತ್ತಿ'ಯ ವಿಚಾರ ಹೇಳುವ ಶಾಸನ).

ಚೆಂಗಾಳ್ವರ ಆಳ್ವಿಕೆ ಸಡಿಲವಾದಮೇಲೂ ಹನಸೋಗೆಯು ಹಿರಿಮೆ ಉಳಿದುಕೊಂಡಿದ್ದಿತೆನ್ನಲೂ ಹಲವು ಶಾಸನಗಳಿವೆ. ಅಲ್ಲಿನ ದೊಡ್ಡಕೆರೆ ಏರಿಯ ಮೇಲೆ ಮಲ್ಲಿಕಾರ್ಜುನ ಮಂಟಪದಲ್ಲಿರುವ ಶಾಸನವೊಂದು–

> 'ಶ್ರೀ ಸ್ವಸ್ತಿ ಶ್ರೀಮತ್ಪ್ರತಾಪ ಚಕ್ರವರ್ತಿಹೋಸಣ ವೀರಬಲಾಳದೇವರಸರ ಕುಮಾರಿ ಹಂಪೆವೊಡೆಯರ ಮನೆಯ ಪ್ರಧಾನ ನಾಗದೇವರಸರ ಮಕ್ಕಳು ಚೂಡಪ್ಪನವರ ಮನೆಯ ಹಂನಸೋಗೆಯ ಅಧಿಕಾರಿ ಅಲಾಳನಾತರು...—ಅಗಸಿದ ಕೆರೆಯ ಧರ್ಮ'

ಎಂದು ಹೇಳುತ್ತದೆ. ಎಂದರೆ ಹನಸೋಗೆಗೇ ಬೇರೆ ಅಧಿಕಾರಿಯೊಬ್ಬನಿರುತ್ತಿದ್ದಂತೆ ಉಲ್ಲೇಖವಿದೆ. ಇನ್ನೊಂದು ಶಾಸನದಲ್ಲಿ, 'ಪನಸೋಗಾಧಿಪ ವಾಸುದೇವ ಶುಭಕೃತೋತ್ತಯ್ಯನಂ ಸುಸ್ಥಿರಂ' ಎಂಬ ಮಾತು ಇದಕ್ಕೆ ಬಲಕೊಡುತ್ತದೆ. ಇದು ಹೊಯ್ಸಳರ ಕಾಲದ ಶಾಸನ.

ಹನಸೋಗೆಯ ಜೈನಮಠದ ಪ್ರಖ್ಯಾತಿ ಎಷ್ಟಿದ್ದಿತೆಂದರೆ ಕಾರ್ಕಳದಲ್ಲಿ 'ಶ್ರೀಸೋಮಾನ್ವಯ ಭೈರವೇಂದ್ರ ತನುಜ' ವೀರಪಾಂಡ್ಯನು 1432ರಲ್ಲಿ (ಶಕ ವರ್ಷ 1352ನೇ ವಿರೋಧಿಕೃತು ಫಾಲ್ಗುಣ ಶುದ್ಧ 12 ಬುಧವಾರ ದಿವಸ) ಗೊಮ್ಮಟಜಿನನ ಅಖಂಡಶಿಲಾಮೂರ್ತಿಯನ್ನು ಪ್ರತಿಷ್ಠೆ ಮಾಡಿಸಿದುದು 'ಪನಸೋಗೆಯ ಲಲಿತಕೀರ್ತಿ' ಗಳೆಂಬ ಮುನಿಯ ಆದೇಶದಂತೆ. ಅಲ್ಲಿನ ಶಾಸನವು ಇದರ ವಿಚಾರ ಹೇಳುತ್ತ "ಯೋ ಭೂಲ್ಲಲಿತಕೀರ್ತ್ಯಾಖ್ಯಸ್ತನ್ಮುನೀಂದ್ರೋಪದೇಶತಃ" ಎನ್ನುತ್ತದೆ. ಈ ಲಲಿತಕೀರ್ತಿಗಳ

ಶಿಷ್ಯ ರತ್ನನಂದಿಯೇ ಸಂಸ್ಕೃತದಲ್ಲಿ 'ಭದ್ರಬಾಹು ಚರಿತೆ'ಯನ್ನು ಬರೆದವನು.

ಚಿಕ್ಕಹನಸೋಗೆಯಲ್ಲಿ ಈಗ ಪಾಳುಬಿದ್ದಿರುವ ಬಸದಿ ಇಷ್ಟು ವೈಭವದ ಹಿನ್ನೆಲೆಯನ್ನು ಹೊಂದಿದೆಯೆಂದು ಹಲವರಿಗೆ ತಿಳಿಯದು. ಅಲ್ಲಿನ ಜನರೇ ಇದನ್ನು ಅರಿಯರು. ಸುತ್ತಮುತ್ತ ಇರುವ ಜೈನ ಸಮುದಾಯದವರಿಗೂ ಇದರ ಕಡೆ ಗಮನ ಹರಿಯುವುದು ಅಪರೂಪ. ಸರ್ಕಾರವಂತೂ ಇದನ್ನು ಅಸಡ್ಡೆಯಿಂದಲೇ ಕಂಡುಕೊಂಡಿದೆ.

ಈ ಬಸದಿ 'ತ್ರಿಕೂಟ' ಜಾತಿಯದು, ಎಂದರೆ ಮೂರು ಗರ್ಭಗೃಹಗಳನ್ನು ಸಾಲಾಗಿ ನಿಲ್ಲಿಸಿದ ಕಟ್ಟಡ. ಒಂದೊಂದು ಗರ್ಭಗೃಹದಲ್ಲೂ ಒಬ್ಬೊಬ್ಬ ತೀರ್ಥಂಕರ ಜಿನನ ಮೂರ್ತಿ. ನಡುವೆ ಇರುವುದು ಮೊದಲ ತೀರ್ಥಂಕರ ಆದಿನಾಥ (ಆದೀಶ್ವರ)ನ ಆಲಯ; ಉತ್ತರ ದಿಕ್ಕಿಗೆ ಇರುವುದು ಹದಿನಾರನೆಯ ತೀರ್ಥಂಕರನಾದ ಶಾಂತಿನಾಥನ ಆಲಯ; ದಕ್ಷಿಣಕ್ಕೆ ಇಪ್ಪತ್ತೆರಡನೆಯ ತೀರ್ಥಂಕರ ಚಂದ್ರನಾಥ (ಅಥವಾ ನೇಮಿನಾಥ). ನಡುವಣ ಗರ್ಭಗೃಹಕ್ಕೆ ಎದುರಾಗಿ ಒಂದೇ ಚಚ್ಚೌಕನಾದ ಮುಖಮಂಟಪ. ಇದರಿಂದ ಮೂರೂ ಗರ್ಭಗೃಹಗಳಿಗೆ ಹೋಗಲು ಮೂರು ಸೊಗಸಾದ ಕೆತ್ತನೆಯ ಕೆಲಸದ ದ್ವಾರಗಳು. ಚಂದ್ರನಾಥ (ನೇಮಿನಾಥ) ತೀರ್ಥಂಕರನ ಆಲಯಕ್ಕೆ ಹೋಗುವ ದ್ವಾರ ತುಂಬ ನಾಜೂಕಾಗಿ, ಕಲಾಕೃತಿಗಳಿಂದ ತುಂಬಿ, ಆಕರ್ಷಕವಾಗಿದೆ. ದ್ವಾರಫಲಕದ ಮೇಲೆ ಗಜಲಕ್ಷ್ಮಿಯ ಸುಂದರ ಚಿತ್ರಣವಿದೆ. ಇಲ್ಲಿಯೇ ಶಾಸನಗಳೂ ಮೂಡಿಕೊಂಡಿವೆ.

ಹನಸೋಗೆಯ ಬಸದಿ – ದ್ವಾರಫಲಕದಲ್ಲಿರುವ ಗಜಲಕ್ಷ್ಮಿ

ಹನಸೋಗೆಯ ಬಸದಿಯಲ್ಲಿ ನೇಮಿನಾಥಮೂರ್ತಿ

ಈ ದ್ವಾರವಿನ್ಯಾಸವನ್ನೇ ಇತರ ಎರಡು ಆಲಯುಗಳಿಗೂ ಅಷ್ಟಿಷ್ಟು ಅಳವಡಿಸಿದ್ದಾರೆ.

ಈ ಕಟ್ಟಡ ಹೊಯ್ಸಳರ ಕಾಲಕ್ಕೆ ಮೊದಲಿನದು. ಗೋಡೆ, ಕಂಬ, ಭುವನಾಸಿ ಇವು ಗಟ್ಟಿಕಲ್ಲಿನಲ್ಲಿ ಕಡೆದವು; ಬಾಗಿಲು ಮತ್ತು ಮೂರ್ತಿಗಳು(ಶಾಂತಿನಾಥ ಮತ್ತು ನೇಮಿ ನಾಥ ಇವು ಉಳಿದುಕೊಂಡಿವೆ) ಬಳಪದ ಕಲ್ಲಿನವು. ಕೆತ್ತನೆ ಕೆಲಸವೂ ಅಷ್ಟೇನೂ ನಾಜೂಕಾದುದಲ್ಲ. ಗಂಟೆ, ಕಲಶ, ಚಕ್ರ ಮೊದಲಾದ ವಿನ್ಯಾಸಗಳು ಸರಳವಾಗಿದ್ದು, ಕಂಬ ಗಳನ್ನು ಸುತ್ತಲೂ ಸರಳವಾಗಿಯೇ ಕಡೆದಿದ್ದಾರೆ. ಅಲಂ ಕರಣ ಎಲ್ಲಿಯೂ ಹೆಚ್ಚೆನ್ನುವಂತಿಲ್ಲ. ಆದಿನಾಥನ ಆಲಯು ಸಿದ್ಧವಾದುದು ಕ್ರಿಸ್ತಾಬ್ದ 1060ರಲ್ಲಿ ಎಂದು ಆಗಲೇ ಹೇಳಿದೆಯಷ್ಟೆ.

ಚುಂಚನಕಟ್ಟೆ

ಸಾಲಿಗ್ರಾಮದಿಂದ ಏಳು ಕಿಲೋಮೀಟರ್ ದೂರ ದಲ್ಲಿರುವ ಚುಂಚನಕಟ್ಟೆ ಕೃಷ್ಣರಾಜನಗರ ತಾಲ್ಲೂಕಿಗೇ ಸೇರಿದ ಹೋಬಳಿ. ಸಾಲಿಗ್ರಾಮ, ಹನಸೋಗೆಗಳು ಈ ಹೋಬಳಿಗೇ ಸೇರಿವೆ. ಗ್ರಾಮ ಪಂಚಾಯತಿ ಈ ಸಣ್ಣ ಊರನ್ನು ನಿರ್ವಹಿಸುತ್ತದೆ. ಈಚೆಗೆ ಇಲ್ಲೊಂದು ಸಕ್ಕರೆ ಕಾರ್ಖಾನೆಯನ್ನು ತೆರೆದಿದ್ದಾರೆ.

ಮೊದಲಿಂದ ಇದೊಂದು ತೀರ್ಥಕ್ಷೇತ್ರವೆಂದು



ಚುಂಚನಕಟ್ಟೆ — ಸಕ್ಕರೆ ಕಾರ್ಖಾನೆ

ಪ್ರಸಿದ್ಧವಾದುದು. ಇಲ್ಲಿ ಕಾವೇರಿಯು ಸಣ್ಣದೊಂದು ಜಲಪಾತವಿರುವುದು ಊರಿನ ಆಕರ್ಷಣೆಯನ್ನು ಹೆಚ್ಚಿಸಿದೆ. ಕಾವೇರಿಯು ಅರವತ್ತು—ಎಂಬತ್ತು ಅಡಿ ಎತ್ತರದಿಂದ ಕೆಳಕ್ಕೆ ಧುಮುಕುತ್ತದೆ. ನೀರಿನ ಬಣ್ಣ ಅರಿಶಿನವಾಗುತ್ತದೆ. ಜಲಪಾತದ ಶಬ್ದವನ್ನು ಸೀತೆ ಮೊರೆವು ಎಂದು ಕರೆಯುತ್ತಾರೆ. ಇದಕ್ಕೊಂದು ಕಥೆ ಹೇಳುತ್ತಾರೆ. ರಾಮನು ಸೀತೆ, ಲಕ್ಷ್ಮಣರೊಂದಿಗೆ ಇಲ್ಲಿಗೆ ಬಂದಿದ್ದಾಗ ಸೀತೆಗೆ ಈ ಜಲಪಾತದಲ್ಲಿ ಮೀಯುವುದು ಇಷ್ಟವಾಗಿದ್ದಿತಂತೆ. ಸೀತೆ ಸಖಿಯರೊಂದಿಗೆ ಸ್ನಾನಕ್ಕೆ ಹೋಗುವಾಗ ಆಕೆಯ ಮಾತು ದೂರದವರೆಗೆ ಕೇಳಿಸುತ್ತಿತ್ತಂತೆ, ಜಲಪಾತದ ಗದ್ದಲವನ್ನೂ ಮೀರಿ. ಇದನ್ನು ಕೇಳಿ ರಾಮನು ನಗುತ್ತ ಲಕ್ಷ್ಮಣನಿಗೆ 'ಅದೋ, ಸೀತೆಯ ಮೊರೆವು!' ಎಂದನಂತೆ. ಅಂದಿನಿಂದ ಜಲಪಾತಕ್ಕೆ ಸೀತೆ ಮೊರೆವು ಎಂಬ ಹೆಸರು ಬಂದಿತಂತೆ.

ಜಲಪಾತದ ಪಕ್ಕದಲ್ಲೇ ಬಲಗಡೆ ಎತ್ತರವಾದ ಗುಡ್ಡದ ಮೇಲೆ ಕೋದಂಡರಾಮರ ದೇವಾಲಯವಿದೆ. ಈ ಗುಡಿಯ ದೊಡ್ಡ ಪ್ರಾಕಾರವನ್ನು ಮೈಸೂರು ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟಿಸಿದರು. ಆದರೆ ಗುಡಿಯೇನೋ ತುಂಬ ಹಳೆಯದು. ಗುಡಿಯ ಹೊರಬಾಗಿಲನ್ನು ಮುಟ್ಟಲು ಮೂವತ್ತು ಮೆಟ್ಟಿಲುಗಳನ್ನು ಹತ್ತಿ ಹೋಗಬೇಕು. ಹೊರಬಾಗಿಲ ಮೇಲೆ ಗೋಪುರವಿಲ್ಲ. ಒಳ ಆವರಣ ವಿಶಾಲವಾಗಿದೆ.



ಚುಂಚನಕಟ್ಟೆ – ಸೀತೆ ಮೊರೆವು



ಚುಂಚನಕಟ್ಟೆಯ ಕೋದಂಡರಾಮ ಗುಡಿ – ಹೊರನೋಟ

ಚುಂಚನಕಟ್ಟೆ – ಗರ್ಭಗುಡಿಯಲ್ಲಿಯ ಸೀತಾರಾಮ ಲಕ್ಷ್ಮಣರು



ರಾಮಾನುಜರ ಪ್ರತಿಮೆಗಳು

ಭಾಷ್ಯಕಾರ ಸನ್ನಿಧಿ

ಗರ್ಭಗುಡಿಯಲ್ಲಿ ಧನುರ್ಧಾರಿಯಾದ ರಾಮನೂ ಬಲಭಾಗದಲ್ಲಿ ಸೀತೆಯೂ ಎಡಭಾಗದಲ್ಲಿ ಲಕ್ಷ್ಮಣನೂ ಇದ್ದಾರೆ. ಸಾಮಾನ್ಯವಾಗಿ ರಾಮನ ಎಡಭಾಗದಲ್ಲಿ ಸೀತೆ ಯಿರುವುದು ವಾಡಿಕೆ. ಇಲ್ಲಿ ಮಾತ್ರ ಬಲಭಾಗದಲ್ಲಿರುವುದು ವಿಶೇಷ. ರಾಮನ ಮತ್ತು ಲಕ್ಷ್ಮಣನ ಎಡಗೈಗಳಲ್ಲಿ ಬಿಲ್ಲು, ಬಲಗೈಗಳಲ್ಲಿ ಬಾಣ ಇವೆ. ಬಾಣವನ್ನು ಇಮ್ಮುಖದ ದೊಡ್ಡ ಶೂಲದಂತೆ ಪ್ರಭಾವಳಿಗೆ ಸೇರಿಸಿ ಕಡೆದಿದ್ದಾರೆ. ಸೀತಾ ರಾಮ ಲಕ್ಷ್ಮಣರ ಹಿಂಭಾಗದ ಪ್ರಭಾವಳಿ ತುಂಬ ಸರಳ ವಾಗಿದ್ದು ಅದರಲ್ಲಿ ಸಿಂಹಲಲಾಟ, ಮಕರಯುಗ್ಮ ಮೊದ ಲಾದ ಯಾವ ವಿನ್ಯಾಸಗಳೂ ಕಾಣುವುದಿಲ್ಲ.

ಗುಡಿಯಲ್ಲಿ ಪಾಂಚರಾತ್ರ ಪದ್ಧತಿಯಂತೆ ಪೂಜೆ ನಡೆಯುತ್ತದೆ. ದಕ್ಷಿಣದೇಶದ ವೈಷ್ಣವ ದೇವಾಲಯಗಳಲ್ಲಿ ಪೂಜಾ ವಿಧಿಗಳು ಪಾಂಚರಾತ್ರವೆಂಬ ಆಗಮವನ್ನೋ ಇಲ್ಲವೇ ವೈಖಾನಸವೆಂಬ ಆಗಮವನ್ನೋ ಅನುಸರಿಸಿರು ವುದು ವಾಡಿಕೆ. ಎರಡೂ ಆಗಮಗಳು ವಾಸುದೇವನಿಂದಲೇ ಹೇಳಲ್ಪಟ್ಟು, ವೈದಿಕಧರ್ಮಕ್ಕೆ ಅನುಕೂಲವಾಗಿದ್ದು, ಸಮಾನವಾಗಿಯೇ ಪ್ರಮಾಣವಾದರೂ, ರಾಮಾನುಜಾ ಚಾರ್ಯರ ಕಾಲದಿಂದ ಈಚೆಗೆ ಪಾಂಚರಾತ್ರ ಆಗಮಕ್ಕೆ ವಿಶೇಷವಾದ ಜನಪ್ರೀತಿ ಒದಗಿಬಂದಿದೆ. ವೈಖಾನಸಾಗಮ ಶುದ್ಧವಾಗಿ ವೈದಿಕ ಸಂಪ್ರದಾಯವನ್ನೇ ಹಿಡಿದು ಅಲ್ಲಿನ ಹೋಮ, ಹವನ ಮೊದಲಾದ ವಿಧಿಗಳನ್ನೇ ಚಾಚೂ ತಪ್ಪದೆ ಕಟ್ಟುಪಾಡಾಗಿ ಅನುಸರಿಸುತ್ತದೆ; ಕೆಲವೊಮ್ಮೆ ರಹಸ್ಯವಾದ ತಾಂತ್ರಿಕ ಪ್ರಕ್ರಿಯೆಗಳೂ ಉಂಟು. ಪಾಂಚ

ರಾತ್ರವೂ ವೈದಿಕವೇ ಆದರೂ ಅದರ ವಿಧಿಗಳು ಸರಳವಾದುವು, ಸುಲಭವಾದುವು, ಜನಸಮುದಾಯಕ್ಕೆ ಒಗ್ಗುವಂಥವು. ಭಕ್ತಿಯೇ ಮುಖ್ಯವಾಗಿ ನಡೆಯುವ ಭಗವದರ್ಚನೆಗೆ ಇಲ್ಲಿ ಹೆಚ್ಚಳ. ಹೀಗಿರುವುದರಿಂದಲೇ ರಾಮಾನುಜಾಚಾರ್ಯರು ತಮ್ಮ ಪ್ರಭಾವವಿದ್ದ ದೇವಾಲಯಗಳಲ್ಲೆಲ್ಲ ಮೊದಲಿಗಿದ್ದ ವೈಖಾನಸಾಗಮದ ಪೂಜೆಗೆ ಬದಲು ಪಾಂಚರಾತ್ರ ಪೂಜೆಯನ್ನು ವಿಧಿಸಿದರೆಂದು ತೋರುತ್ತದೆ. ವೈಖಾನಸವೇನೋ ತುಂಬ ಪ್ರಾಚೀನವಾದುದೇ; ತಿರುಮಲೆ ತಿರುಪತಿ ದೇವಾಲಯದಲ್ಲಿ ರಾಮಾನುಜರ ಪ್ರಭಾವವಿದ್ದರೂ ವೈಖಾನಸಪೂಜೆಯೇನೂ ಬದಲಾಗಲಿಲ್ಲ! ಆದರೆ ಉಳಿದಂತೆ ಹಲವು ಶ್ರೀವೈಷ್ಣವ ದೇವಾಲಯಗಳಲ್ಲಿ ಪಾಂಚರಾತ್ರ ಪದ್ಧತಿಯೇ ಹರಡಿಕೊಂಡಿದೆ. ಮಾಧ್ವಸಂಪ್ರದಾಯದ ವೈಷ್ಣವ ದೇವಾಲಯಗಳಲ್ಲೂ ಪಾಂಚರಾತ್ರಪದ್ಧತಿಯೇ ಮೂಲವಾದರೂ ಮಧ್ವಾಚಾರ್ಯರು ವಿಧಿಸಿದ 'ತಂತ್ರಸಾರ' ಪದ್ಧತಿಯಂತೆಯೇ ಪೂಜೆ ನಡೆಯುತ್ತದೆ. ಇದೂ ಪಾಂಚರಾತ್ರದ ಒಂದು ಭೇದವೇ ಎಂದು ಬಗೆಯಬಹುದು.

ಪಾಂಚರಾತ್ರ ಆಗಮಗಳಲ್ಲಿ ಸನತ್ಕುಮಾರಸಂಹಿತೆ ಮುಖ್ಯವಾದುದು, ಅದೇ ಪ್ರಾಚೀನವಾದುದೆಂದೂ ಹೇಳುವುದುಂಟು. ನಾರದರು ಸನತ್ಕುಮಾರರೆಂಬ ಋಷಿಗಳಿಗೆ ಮಾಡಿದ ಉಪದೇಶ ಈ ಸಂಹಿತೆಯಲ್ಲಿದೆ. ವಾಸುದೇವನೇ ಪರಬ್ರಹ್ಮ; ಅವನು ಸಂಕರ್ಷಣ್ಯ, ಪ್ರದ್ಯುಮ್ನ, ಅನಿರುದ್ಧ ಎಂಬ ರೂಪಗಳನ್ನೂ ಕೂಡಿಸಿಕೊಂಡು

ಚತುರ್ವ್ಯೂಹವಾಗಿ ತೋರಿಕೊಳ್ಳುತ್ತಾನೆ; ಜನರ ಪರಮಾರ್ಥಸಾಧನೆಗೆ ಅರ್ಚಾವತಾರವಾಗಿಯೂ ಕಾಣಿಸಿ ಕೊಳ್ಳುತ್ತಾನೆ; ಆಗ ಅವನ ಪೂಜೆಗೆಂದು ದೇವಾಲಯ ನಿರ್ಮಾಣ, ಮೂರ್ತಿಪ್ರತಿಷ್ಠೆ, ನಿತ್ಯನೈಮಿತ್ತಿಕಪೂಜೆ, ಮಾಸಿಕ—ಸಾಂವತ್ಸರಿಕ ಉತ್ಸವಗಳು ಮೊದಲಾದ ವಿಧಿ ಗಳನ್ನು ಮಾಡಬೇಕು. ಈ ವಿವರಗಳೆಲ್ಲ ಪಾಂಚರಾತ್ರ ಆಗಮಗಳಲ್ಲಿ ಬರುತ್ತವೆ.

ಇಲ್ಲಿ ಶ್ರೀವೈಷ್ಣವ ಆಚಾರ್ಯರಾದ ರಾಮಾನುಜರ ಮೂರ್ತಿಯೊಂದು ಕಾಣಸಿಗುತ್ತದೆ; ಪಕ್ಕದಲ್ಲಿ ಯಾರೋ ಆಳ್ವಾರೊಬ್ಬರ ಮೂರ್ತಿಯೂ ಇದೆ. ಗರ್ಭಗುಡಿಯ ಪಕ್ಕದಲ್ಲಿ ಇರಿಸಿರುವ ದೊಡ್ಡ ಹನುಮಂತ ವಾಹನ ಎಲ್ಲರ ಕಣ್ಣನ್ನೂ ಸೆಳೆಯುತ್ತದೆ. ಆವರಣದೊಳಗಿರುವ ಕಲ್ಯಾಣಮಂಟಪದಲ್ಲಿ ದಶಾವತಾರಗಳ ಚಿತ್ರಣವಿದೆ. ಗುಡಿಯ ಮುಂಭಾಗದಲ್ಲಿ ಇನ್ನೊಂದು ಕಲ್ಯಾಣಮಂಟಪ ವಿದೆ.

ಪ್ರತಿವರ್ಷ ಉತ್ತರಾಯಣ ಪುಣ್ಯಕಾಲಕ್ಕೆ (ಸಂಕ್ರಾಂತಿ) ರಾಮದೇವರ ರಥೋತ್ಸವ ಜರುಗುತ್ತದೆ. ಅದೇ ಸಮಯದಲ್ಲಿ (ಸಾಮಾನ್ಯವಾಗಿ ಜನವರಿ ತಿಂಗಳು) ದನಗಳ ಪರಿಷೆಯೊಂದು ನೆರೆಯುತ್ತದೆ. ಈ ಜಾನುವಾರು ಜಾತ್ರೆಗೆ ನೂರಾರು ಮೈಲುಗಳಿಂದ ದನಗಳನ್ನು ತರು ತ್ತಾರೆ. ಸಾವಿರಾರು ದನಗಳು ನೆರೆಯುವ ಈ ಜಾತ್ರೆ ಪ್ರಸಿದ್ಧವಾದುದು. ಇದು ಒಟ್ಟು ಹದಿನೈದು ದಿನಗಳ ಕಾಲ ನಡೆಯುವುದು.



ಚುಂಚನಕಟ್ಟೆ — ಹನುಮಂತವಾಹನ

'ಚುಂಚನಕಟ್ಟೆ' ಎಂದು ಹೆಸರು ಬರಲು ಚುಂಚನೆಂಬ ಬೇಡ ಕಾರಣನೆಂದು ಕಥೆಯಿದೆ. ಚುಂಚನೂ ಅವನ ಹೆಂಡತಿ ಚುಂಚಿಯೂ ರಾಮಭಕ್ತರಂತೆ. ಅವರು ಇಲ್ಲಿ ಅಡವಿಯಲ್ಲಿ ಇರುತ್ತಿದ್ದು ರಾಮನನ್ನು ಕುರಿತು ತಪಸ್ಸು ಮಾಡಿದಾಗ ಸೀತಾರಾಮ ಲಕ್ಷ್ಮಣರು ಅವರಿಗೆ ಒಲಿದು ಇಲ್ಲಿಗೆ ಬಂದು ನಿಂತರಂತೆ. ಗುಡಿಯಲ್ಲಿ ಚುಂಚ-ಚುಂಚಿಯರೆಂದು ಹೇಳುವ ಶಿಲ್ಪವೊಂದಿದೆ. ಈ ಕಥೆಯ ಇನ್ನೊಂದು ಪಾಠದಲ್ಲಿ ಚುಂಚ ಮತ್ತು ಚುಂಚಿ ಎಂಬಿಬ್ಬರು ಬೇಡರು ರಾಮಭಕ್ತರೆಂದು ಹೇಳಿದೆ.

ಆದರೆ ಚುಂಚನ'ಕಟ್ಟೆ'ಯೆಂದಾದುದು, ಇಲ್ಲಿನ ಜಲಪಾತದ ಮೇಲ್ಭಾಗದಲ್ಲಿ ಕೊಂಚ ದೂರ (ಸುಮಾರು ನೂರು ಗಜದಷ್ಟು ದೂರ, 'ಧನುಷ್ಕೋಟಿ'ಯೆಂಬಲ್ಲಿ) ಕಾವೇರೀ ನದಿಗೆ ಅಡ್ಡಲಾಗಿ ಕಟ್ಟಿರುವ ಕಟ್ಟೆಯಿಂದ (ಸೇತುವೆಯಿಂದ). ಈ ಸೇತುವೆಯನ್ನೂ, ಅದಕ್ಕೆ ಉತ್ತರಕ್ಕೆ ಕಾಣುವ ರಾಮಸಮುದ್ರ ಅಣೆಕಟ್ಟನ್ನೂ ಮೈಸೂರು ಅರಸರಾಗಿದ್ದ ಚಿಕ್ಕದೇವರಾಜ ಒಡೆಯರು 1672ರ ಸುಮಾರಿಗೆ ಕಟ್ಟಿಸಿದರು. ರಾಮಸಮುದ್ರ ಅಣೆಕಟ್ಟು ಒಂದು ಸಾವಿರ ತೊಂಬತ್ತು ಅಡಿಗಳಷ್ಟು ಉದ್ದವಿದೆ. ಇದರಿಂದ ಹೊರಡುವ ರಾಮಸಮುದ್ರ ನಾಲೆ ನಲವತ್ತೊಂದು ಮೈಲು ಉದ್ದವಿದ್ದು ಕೃಷ್ಣರಾಜನಗರದ (ಎಡತೊರೆಯ) ಹತ್ತಿರದವರೆಗೂ ಹರಿದುಬರುತ್ತದೆ. ಸುಮಾರು ಆರುಸಾವಿರ ಎಕರೆ ಅಚ್ಚುಕಟ್ಟು ಇದಕ್ಕಿದೆಯೆಂದು ಹೇಳುತ್ತಾರೆ.

ಚೆಂಚನಕಟ್ಟೆ – ಚೆಂಚ–ಚೆಂಚಿಯರು

ಕಾವೇರೀ ನದಿಗೆ ಕಟ್ಟಲಾಗಿರುವ ಅಣೆಕಟ್ಟುಗಳ ಕಥೆ ಸ್ವಾರಸ್ಯವಾದುದು. ತಲಕಾವೇರಿಯಿಂದ ಹೊರ ಹೊಮ್ಮಿ ಹರಿದುಬರುವ ನದಿಗೆ ಮೊದಲ ಅಣೆಕಟ್ಟೆಂದರೆ ರಾಮನಾಥಪುರದ ಹತ್ತಿರವಿರುವ ಕಟ್ಟೆಪುರ ಎಂಬಲ್ಲಿರುವುದು. ಈ ಸ್ಥಳಕ್ಕೆ ಮೊದಲು ಸೌಭರಿ ಕ್ಷೇತ್ರವೆಂಬ ಹೆಸರಿದ್ದಿತಂತೆ; ಈ ಅಣೆಕಟ್ಟಾದ ಮೇಲೆ ಕಟ್ಟೆಪುರವೆಂದೇ ಪ್ರಸಿದ್ಧವಾಯಿತು. ಈ ಕಟ್ಟೆಯನ್ನು ಕಟ್ಟಿದವರು ಶ್ರೀ ರುದ್ರಲಿಂಗಣಸ್ವಾಮಿಗಳೆಂಬ ವೀರಶೈವ ಸಂನ್ಯಾಸಿಗಳಂತೆ. ಇವರ ಸಮಾಧಿಯಿರುವ ಎಡೆಯನ್ನು ಜಂಗಮಕಟ್ಟೆ ಎಂದು ಕರೆಯುತ್ತಾರೆ. ಜಂಗಮಕಟ್ಟೆಪುರವೇ ಮೊಟಕಾಗಿ ಕಟ್ಟೆಪುರವಾಯಿತು. ಈ ಸ್ವಾಮಿಗಳು ಇದ್ದ ಕಾಲ ಹತ್ತನೆಯ ಶತಮಾನವೆಂದು ಪ್ರತೀತಿ.

ಕಟ್ಟೆಪುರ ಅಣೆಕಟ್ಟನಿಂದ ಎರಡು ನಾಲೆಗಳು ಹೊರಡುತ್ತವೆ. ಒಂದು ಕೋಣನೂರು, ರಾಮನಾಥಪುರ, ಬಸವಾಪಟ್ಟಣ ಮೊದಲಾದ ಊರುಗಳನ್ನು ತಣಿಸಿ ಪಶುಪತಿಯವರೆಗೂ ಹೋಗುತ್ತದೆ. ಇನ್ನೊಂದು ರಾಮನಾಥಪುರ ಸೇತುವೆ ಬಳಿ ಸಾಗಿ ರುದ್ರಪಟ್ಟಣ, ಹನಸೋಗೆ ಈ ಊರುಗಳಿಗೆ ಹೋಗುತ್ತದೆ.

ಮುಂದೆ ಬಳ್ಳೂರು ಎಂಬಲ್ಲಿ ನದಿಗೆ ಇನ್ನೊಂದು ಕಟ್ಟೆಯನ್ನು ಕಟ್ಟಿದರು. ಇದರಿಂದಲೂ ಎರಡು ನಾಲೆಗಳು ಹೊರಟು ಒಂದು ಚುಂಚನಕಟ್ಟೆ ಕಡೆಗೂ ಇನ್ನೊಂದು ಸಾಲಿಗ್ರಾಮದ ಕಡೆಗೂ ಸಾಗುತ್ತವೆ. ನದಿಯು ಮೈಸೂರು ಜಿಲ್ಲೆಯನ್ನು ಸೇರುವಾಗ ಅಳಲೆಕಟ್ಟೆ (ಕೃಷ್ಣರಾಜನಗರ

ತಾಲ್ಲೂಕು) ಎಂಬಲ್ಲಿ ಮತ್ತೊಂದು ಕಟ್ಟೆಯಿದ್ದು ಇಲ್ಲಿಂದ ನಾಲೆ ಸಾಲಿಗ್ರಾಮಕ್ಕೆ ಹೋಗುತ್ತದೆ. ಚುಂಚನಕಟ್ಟೆ ಹತ್ತಿರ ಹನುಮಂತಕಟ್ಟೆಯೆಂಬ ಮುಗುದೊಂದು ಕಟ್ಟೆಯನ್ನು ಚಿಕ್ಕದೇವರಾಜ ಒಡೆಯರು ಕಟ್ಟಿಸಿದರಂತೆ; ಅದು ಶಿಥಿಲವಾಗಲು ದಿವಾನ್ ಪೂರ್ಣಯ್ಯನವರು ಅದನ್ನು ದುರಸ್ತಿ ಮಾಡಿಸಿದರಂತೆ. ಚುಂಚನಕಟ್ಟೆಯು ರಾಮಸಮುದ್ರ ಅಣೆಕಟ್ಟಿನ ಪ್ರಸ್ತಾಪ ಮೊದಲೇ ಬಂದಿದೆ. ಇಲ್ಲಿಂದ ನದಿಯ ಉತ್ತರಕ್ಕೆ (ಕಟ್ಟೆಯ ಬಲದಂಡೆ) ನಾಲೆಯೊಂದು ಹೊರಟು ಸಾಲಿಗ್ರಾಮದ ಕಡೆ ಹೋಗುತ್ತದೆ; ಇದರ ಉದ್ದ ಇಪ್ಪತ್ತುನಾಲ್ಕು ಮೈಲುಗಳು. ನದಿಯ ದಕ್ಷಿಣಕ್ಕೆ (ಕಟ್ಟೆಯ ಎಡದಂಡೆ) ಹೊರಟ ನಾಲೆ ಮಿರ್ಲೆಯ ಕಡೆ ಹೋಗುತ್ತದೆ; ಇದರ ಉದ್ದ ಮೂವತ್ತೆಂಟು ಮೈಲುಗಳು.

ಇದಾದ ಮೇಲೆ ಮುಂದಿನ ಅಣೆಕಟ್ಟೇ ಲೋಕ ವಿಖ್ಯಾತವಾದ ಕನ್ನಂಬಾಡಿ ಕಟ್ಟೆ ಅಥವಾ ಕೃಷ್ಣರಾಜ ಸಾಗರ. ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ, ದಿವಾನ್ ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ 1911ರಂದು ಮೈದಳೆದ ಈ ಅಣೆಕಟ್ಟಿನ ವಿಚಾರ ಎಲ್ಲರಿಗೂ ತಿಳಿದೇ ಇದೆ.

'ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ' ಮಾಲೆಯ ಇತ್ತೀಚಿನ ಪ್ರಕಟಣೆಗಳು

ವ್ಯಾಸಬೇಡರು	ಕರ್ನಾಟಕದಲ್ಲಿ ಪುರಾತನ ವಿದ್ಯಾಕೇಂದ್ರಗಳು
ರಾವ್ ಬಹದ್ದೂರ್ ಎಂ. ಶಾಮರಾಯರು	ಸಾವಿರದ ವರಕವಿ ಬೇಂದ್ರೆ
ಸಂಗೀತಪುರ	ಪ್ರವಾಸಿಗರು ಕಂಡ ಕನ್ನಡಿಗರ ಜನಜೀವನ
ಕೆಂಗಲ್ ಹನುಮಂತಯ್ಯ	ಗೋದಾವರಿ
ತೊದವರು	ಜನಾರ್ದನರಾವ್ ದೇಸಾಯಿ
ಕೊರಗರು	ನಂಜನಗೂಡು
ಕುಕ್ಕೇ ಸುಬ್ರಹ್ಮಣ್ಯ	ದಕ್ಷಿಣ ಕನ್ನಡದ ಕುಡುಬಿಯರು
ಗುಮ್ಮನಾಯಕನ ಪಾಳಯದ ಪಾಳೆಯಗಾರರು	ಕುಂಭಾಸಿ
ಕರ್ನಾಟಕದ ಜಲಪಾತಗಳು	ಸಜ್ಜಲಗುಡ್ಡದ ಶ್ರೀ ಶರಣಮ್ಮನವರು
ಗಂಗಾಧರ ಮಡಿವಾಳೇಶ್ವರ ತುರಮರಿ	ವರಾಹಿ
ಸಂತಮೇರಿ ದ್ವೀಪ (ಕಲ್ಪದ್ರುಮ ದ್ವೀಪ)	ಡಿ. ದೇವರಾಜ ಅರಸು
ಪಾಂಡೇಶ್ವರ ಗಣಪತಿರಾಯರು	ಕರ್ನಾಟಕದ ಕರಕುಶಲ ಕಲೆಗಳು
ಸ್ವಾಮಿ ಶ್ರೀ ಚಿದಂಬರ	ಕರ್ನಾಟಕದ ಹಬ್ಬಗಳು
ಶಿರಸಿಯ ಶ್ರೀ ಮಾರಿಕಾಂಬೆ	ಮೊಳಹಳ್ಳಿ ಶಿವರಾಯರು
ಸಮರ ಚಿತ್ರಗಳು	ಶ್ರೀ ವಾದಿರಾಜರು
ಗುಡಿಗಾರರು	ಕೋಲಾಟಗಳು
ಕರ್ನಾಟಕದ ಶಕ್ತಿದೇವತೆಗಳು	ವೀರ ಕಂಪಣರಾಯ
ವೈಣಿಕ ವಿದ್ವಾನ್ ಎಲ್. ರಾಜಾರಾವ್	ನಾಗರಹೊಳೆ

ಪ್ರತಿ ಪುಸ್ತಕದ ಬೆಲೆ ರೂ. 2-00

ಕನ್ನಡ ನಾಡು ಮತ್ತು ಕನ್ನಡಿಗರ ಚರಿತ್ರೆ ೧

ಐ ಬಿ ಎಚ್ ಪ್ರಕಾಶನ
ಬೆಂಗಳೂರು ೧





523